**ದಿ.22-04-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 4 ಮತ್ತು 5 ನೇ ಪ್ರತಿವಾದಿಯರ ಪರ ಶ್ರೀ.ಸಿ.ಎಸ್.ಎಸ್ ವಕೀಲರಿಂದ.**

1. ಬಸಪ್ಪ ಮೂಲತಹ ಕಡೂರು ತಾಲ್ಲೂಕಿನ ಮಂಗೇನಹಳ್ಳಿ ಗ್ರಾಮದವರಾಗಿರುತ್ತಾರೆ. ಅವರು ತುಂಬಾ ವರ್ಷಗಳ ಹಿಂದೆ ದೋರನಾಳು ಗ್ರಾಮಕ್ಕೆ ಬಂದಿರುತ್ತಾರೆ. ನನ್ನ ಅಜ್ಜನ ಹೆಸರು ಮಲ್ಲೇಗೌಡ ಆಗಿರುತ್ತದೆ. ಮಲ್ಲೇಗೌಡರ ತಂದೆ ಮಲ್ಲಪ್ಪನವರಿಗೆ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಮಲ್ಲೇಗೌಡರ ತಂದೆಯ ಹೆಸರು ಗೊತ್ತಿರುವುದಿಲ್ಲ. ನನ್ನ ತಂದೆಯ ಕಾಲದಲ್ಲಿ ನಾವು ದೋರನಾಳು ಗ್ರಾಮಕ್ಕೆ ಬಂದಿರುತ್ತೇವೆ. ನನ್ನ ತಂದೆ ಬಸಪ್ಪನವರಿಗೆ ಅವರ ತಂದೆ ಮಲ್ಲೇಗೌಡರವರಿಂದ ಆಸ್ತಿಗಳು ಬಂದಿದ್ದು ಸದರಿ ಆಸ್ತಿಗಳ ಸಂಖ್ಯೆ ಹಾಗೂ ಸರ್ವೆ ನಂಬರ್, ವಿಸ್ತೀರ್ಣ ನನಗೆ ಗೊತ್ತಿಲ್ಲ. ನನ್ನ ತಂದೆ ಬಸಪ್ಪನವರಿಗೆ ಮಲ್ಲೇಗೌಡರ ಕಡೆಯಿಂದ ಆಸ್ತಿಗಳು ಬಂದಿರುತ್ತವೆ ಎಂದು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ. ಇದೇ ಮೊದಲ ಬಾರಿ ಮಲ್ಲೇಗೌಡರ ಸ್ವತ್ತುಗಳನ್ನು ಬಸಪ್ಪನವರು ಮಾರಾಟ ಮಾಡಿಕೊಂಡು ಬಂದಿರುತ್ತಾರೆ ಎಂದು ಹೇಳುತ್ತಿದ್ದೇನೆ ಎಂದರೆ ನಿಜ. ಬಸಪ್ಪನವರಿಗೆ ಮಲ್ಲೇಗೌಡರ ಕಡೆಯಿಂದ ಯಾವುದೇ ಸ್ವತ್ತುಗಳು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಮಲ್ಲೇಗೌಡರ ಸ್ವತ್ತುಗಳನ್ನು ಬಸಪ್ಪನವರು ಮಾರಾಟ ಮಾಡಿಕೊಂಡು ಬಂದ ಬಗ್ಗೆ ದಾಖಲಾತಿಗಳು ಇರುತ್ತವೆ. ಬಸಪ್ಪನವರು ದೋರನಾಳು ಗ್ರಾಮಕ್ಕೆ ಬಂದಾಗ ಕೂಲಿಕೆಲಸ ಮಾಡಿಕೊಂಡಿದ್ದರು ಎಂದರೆ ನಿಜ, ಸಾಕ್ಷಿಯು ಸ್ವತಃ ಜಮೀನುಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಮನೆಯನ್ನು ಸಹ ದೋರನಾಳು ಗ್ರಾಮದಲ್ಲಿ ಮಾಡಿಕೊಂಡಿದ್ದರು ಎಂದು ಹೇಳುತ್ತಾರೆ.

2. ಶಂಕರಪ್ಪ ಮತ್ತು ಮಲ್ಲೇಶಪ್ಪ ನನ್ನ ಅಣ್ಣಂದಿರು ಎಂದರೆ ನಿಜ. 3 ಮತ್ತು 4 ನೇ ಪ್ರತಿವಾದಿಯರು ನನ್ನ ತಮ್ಮಂದಿರಾಗಿದ್ದು 5 ನೇ ಪ್ರತಿವಾದಿ ನನ್ನ ಸಹೋದರಿಯರಾಗಿರುತ್ತಾರೆ ಎಂದರೆ ನಿಜ. ನಾವೆಲ್ಲರೂ ದೋರನಾಳು ಗ್ರಾಮದಲ್ಲಿ ಜನಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಮಂಗೇನಹಳ್ಳಿಯಿಲ್ಲಿ ಜನಿಸಿದ್ದ ಕುರಿತು ದಾಖಲಾತಿಗಳು ಇದೆಯಾ ಎಂದರೆ ಸಾಕ್ಷಿ ನಾನು ಶಾಲೆಗೆ ಹೋಗಿಲ್ಲದ ಕಾರಣ ಯಾವುದೇ ದಾಖಲೆಗಳು ಇರುವುದಿಲ್ಲ ಎನ್ನುತ್ತಾರೆ. ಶಂಕರಪ್ಪ ಕಂಡಕ್ಟರ್ ಕೆಲಸ ಮಾಡುತ್ತಿದ್ದರು. ಅವರು ಸೇವೆಯಿಂದ ನಿವೃತ್ತಿ ಹೊಂದಿ ಸುಮಾರು 2-3 ವರ್ಷಗಳಾಗಿವೆ. ಶಂಕರಪ್ಪ ಸರ್ಕಾರಿ ನೌಕರರಾದ ಕಾರಣ ಅವರು ಎಲ್ಲಿ ಹುಟ್ಟಿದ್ದರು ಎಂದು ದಾಖಲಾತಿಗಳು ಇರುತ್ತವೆ ಎಂದರೆ ನಿಜ. ನನ್ನ ಅಣ್ಣ ತಮ್ಮಂದಿರೆಲ್ಲರೂ ಓದಿರುತ್ತಾರೆ. ಅವರು ದೋರನಾಳು ಗ್ರಾಮದಲ್ಲಿ ಓದಿದ್ದು ನಂತರ ಬೇರೆ ಕಡೆ ಬಂದಿರುತ್ತಾರೆ ಎಂದರೆ ನಿಜ. ಶಂಕರಪ್ಪನವರು ಬೆಂಗಳೂರಿನಲ್ಲಿ ಆರ್.ಸಿ.ಸಿ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ಆ ಮನೆಯನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತೀರಾ ಎಂದರೆ ಸಾಕ್ಷಿ ಅದು ಅವರ ಬಾಡಿಗೆ ಮನೆಯೋ ಸ್ವಂತ ಮನೆಯೋ ನಗೆ ಗೊತ್ತಿರುವುದಿಲ್ಲ ಎನ್ನುತ್ತಾರೆ. ಶಂಕರಪ್ಪನವರಿಗೆ ಎಷ್ಟು ಆಸ್ತಿ ಇದೆ ಎಂದು ನನಗೆ ಗೊತ್ತಿರುವುದಿಲ್ಲ, ನಾನು ಅದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ.

3. ಶಂಕರಪ್ಪನವರಿಗೆ ತರೀಕೆರೆಯ ಬಾಪೂಜಿ ನಗರದಲ್ಲಿ 30 ಇಂಟು 45 ಅಡಿ ವಿಸ್ತೀರ್ಣದ ನಿವೇಶನ ಇದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಶಿವಮೊಗ್ಗದ ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ ಒಂದು ನಿವೇಶನ ಇದೆ ಎಂದರೆ ನನಗೆ ಗೊತ್ತಿಲ್ಲ. ಬೆಂಗಳೂರಿನ ಬಿಳೇಕಲ್ಲಹಳ್ಳಿಯಲ್ಲಿ

ಶಂಕರಪ್ಪ ಅವರ ಹೆಂಡತಿ ದಾಕ್ಷಾಯಿಣಮ್ಮನವರ ಹೆಸರಿನಲ್ಲಿ ಒಂದು ನಿವೇಶನ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಂದ್ರಶೆಖರ್‌ರವರು ತಮ್ಮ ಪ್ರತಿವಾದ ಪತ್ರದಲ್ಲಿ ಸ್ವತ್ತುಗಳ ಅಸಸ್ಮೆಂಟ್ ಸಂಖ್ಯೆಯನ್ನು ಹೇಳಿರುವ ವಿಚಾರವನ್ನು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಈಗ ತಿಳಿದುಕೊಂಡಿರುತ್ತೇನೆ ಎನ್ನುತ್ತಾರೆ. ಆ ಸ್ವತ್ತುಗಳ ದಠಾಖಲಾತಿಗಳನ್ನು ತೆಗೆದುಕೊಂಡು ಬರಲು ಏನಾದರೂ ತೊಂದರೆ ಇದೆಯಾ ಎಂದರೆ ಸಾಕ್ಷಿ ಬೆಂಗಳೂರಿನ ಕಡೆ ಇರುವ ಸ್ವತ್ತುಗಳ ದಾಖಲೆಗಳನ್ನು ತರಲು ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ.

4. ಶಂಕರಪ್ಪ ನಾನು ಮತ್ತು ದೇವೇಂದ್ರಪ್ಪ ವಿಶ್ವಾಸದಿಂದ ಇದ್ದೇವೆ ಎಂದರೆ ನಿಜ. ಸಾಕ್ಷಿ ಸ್ವತಃ ನನಗೆ ಕಷ್ಟ ಬಂದಿರುವ ಕಾರಣ ಈ ದಾವೆ ದಾಖಲು ಮಾಡಿರುತ್ತೇನೆ ಎನ್ನುತ್ತಾರೆ. ದೇವೇಂದ್ರಪ್ಪ ಹಳಿಯಾರು ಗ್ರಾಮದಲ್ಲಿ 3 ಎಕರೆ ಜಮೀನನ್ನು ಇಟ್ಟುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬದಲ್ಲಿ ನನ್ನ ತಂದೆ ವ್ಯಾಪಾರ ಮಾಡುತ್ತಿರಲಿಲ್ಲ ಎಂದರೆ ನಿಜ. ಚಂದ್ರಶೇಖರಪ್ಪನವರು ಲಕ್ಷ್ಮಿ ಬಾರ್ ಅಂಡ್ ರೆಸ್ಟೋರೆಂಟ್ ಎನ್ನುವ ಅಂಗಡಿ ಇಟ್ಟುಕೊಂಡಿದ್ದರು ಎಂದರೆ ಸಾಕ್ಷಿ ಒಟ್ಟು ಕುಟುಂಬದಿಂದ ಇಟ್ಟಿದ್ದರು ಎನ್ನುತ್ತಾರೆ. ಸದರಿ ಅಂಗಡಿ ನನ್ನ ಸಹೋದರ ಚಂದ್ರಶೇಖರ್ ರವರ ಹೆಸರಿನಲ್ಲಿದ್ದು ಎಲ್ಲರೂ ಸೇರಿ ಅವರ ಹೆಸರಿಗೆ ಮಾಡಿದ್ದರು ಎನ್ನುತ್ತಾರೆ. ಎಲ್ಲರೂ ಸೇರಿ ಚಂದ್ರಶೇಖರ್ ರವರ ಹೆಸರಿಗೆ ಅಂಗಡಿಯನ್ನು ಕೊಟ್ಟಿರುವ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಎಲ್ಲರೂ ಸೇರಿ ಚಂದ್ರಶೇಖರ್ ರವರಿಗೆ ಅಂಗಡಿಯನ್ನು ಕೊಟ್ಟಿರುವುದು ನನಗೆ ಗೊತ್ತು, ಆದರೆ ದಾಖಲೆ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಚಂದ್ರಶೇಖರ್‌ರವರು 1986-87 ರಲ್ಲಿ ಅಂಗಡಿಯನ್ನು ನಡೆಸುತ್ತಿರುವ ವಿಚಾರ ನನಗೆ

ಗೊತ್ತು. ಮದ್ಯದ ಅಂಗಡಿಯನ್ನು ನಡಲು ಪರವಾನಗಿ ತೆಗೆದುಕೊಳ್ಳಬೇಕು ಎನ್ನುವ ವಿಚಾರ ನನಗೆ ಗೊತ್ತು. ಪರವಾನಗಿ ಚಂದ್ರಶೇಖರ್ ರವರ ಹೆಸರಿನಲ್ಲಿ ಇತ್ತು ಎಂದರೆ ನಿಜ. ಸದರಿ ಅಂಗಡಿಯನ್ನು ಆರಂಬಿಸುವ ಸಮಯದಲ್ಲಿ ನನ್ನ ತಂದೆ ಬದುಕಿದ್ದರು ಎಂದರೆ ನಿಜ. ಅದರಿಂದ ಚಂದ್ರಶೇಖರ್ ರವರಿಗೆ ಆದಾಯ ಚೆನ್ನಾಗಿತ್ತು ಎಂದರೆ ನಿಜ. ಆ ರೀತಿ ಬಂದ ಆದಾಯದಿಂದ ಅವರು ಹಲವಾರು ಸ್ವತ್ತುಗಳನ್ನು ಖರೀದಿಸಿದ್ದರು ಎಂದರೆ ಸಾಕ್ಷಿ ಒಟ್ಟು ಕುಟುಂಬದಿಂದ ಅಂಗಡಿಯನ್ನು ಇಟ್ಟಿದ್ದರು ಎನ್ನುತ್ತಾರೆ.

5. ದಾವಾ ಅನುಸೂಚಿ 1 ನೇ ಸ್ವತ್ತನ್ನು ನನ್ನ ತಂದೆ ತಿಮ್ಮಯ್ಯನವರಿಂದ ಖರೀದಿ ಮಾಡಿದ್ದರು ಎಂದರೆ ನಿಜ. ಸದರಿ ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿ ನನ್ನ ತಂದೆಯ ಹೆಸರಿನಲ್ಲಿ ಯಾವುದೇ ಸ್ವತ್ತುಗಳು ಇರಲಿಲ್ಲ ಎಂದರೆ ನಿಜ. ದಾವಾ ಐಟಂ ನಂ.1 ನೇ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಶ್ರೀ.ಸಿ.ಎಸ್.ಎಸ್ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ. ರವರು, ತರೀಕೆರೆ.